## ಕಳೆದ ಸಂಚಿಕೆಯಲ್ಲಿ



ಕೇರಳವನ್ನು ಬೀಳ್ಕೊಂಡು ದೆಹಲಿಗೆ ಬಂದ ಕ್ರಾಂತಿ ರೆಡ್ಡಿಯನ್ನು ಸ್ವಾಗತಿಸಿದ್ದು ಸಿಂಧೂ ಮೆನನ್ನಳ ಕರೆ. ಆದರೆ, ಆಕೆ ದೆಹಲಿಯಲ್ಲಿರದೆ ಮಸ್ಸೂರಿಯಲ್ಲಿದ್ದಳು. ಸಿಂಧೂ ಮೆನನ್‌ಳನ್ನು ಭೇಟಿಯಾಗಲು ಮಸ್ಸೂರಿಗೆ ಹೋಗಲೇ ಬೇಡವೇ ಎನ್ನುವ ಯೋಚನೆಯಲ್ಲಿದ್ದ ಕ್ರಾಂತಿ ರೆಡ್ಡಿಯನ್ನು ಆತನ ಗೆಳೆಯ ರಾಘವ ರೆಡ್ಡಿಯ ಒಡನಾಟ ದೆಹಲಿಯಲ್ಲೇ ಉಳಿಯುವಂತೆ ಮಾಡಿತು. ಗೆಳೆಯನ ಜೊತೆ ಭೇಟಿಯಾದ ರಾಜಕಾರಣಿ ಕೊಂಡಯ್ಯನ ಪರಿಚಯ ಬೇರೊಂದು ವ್ಯಕ್ತಿತ್ವವನ್ನೂ ಪರಿಚಯಿಸಿತು. ದೆಹಲಿಯಲ್ಲಿದ್ದ ಅಣ್ಣ ಮಸ್ಸೂರಿಗೆ ಹೊರಟು ನಿಂತಿರುವುದಾಗಿ ಹೇಳಿದ್ದರಿಂದ ಕ್ರಾಂತಿಗೆ ತಕ್ಷಣಕ್ಕೆ ಅಣ್ಣನ ಭೇಟಿಯೂ ಆಗಲಿಲ್ಲ. ಅದೇ ವೇಳೆಗೆ ಕೇರಳದಿಂದ ಭಗವಾನ್ ಕುಟ್ಟಿ ಮತ್ತೆ ಕರೆ ಮಾಡಿದ. ಕೆ.ಎಮ್. ನಯ್ಯಾರರು ದೆಹಲಿಗೆ ಬರುತ್ತಿರುವ ವರ್ತಮಾನ ಮುಟ್ಟಿಸಿದ.

ಅಣ್ಣ ಸತ್ಯನಾರಾಯಣುಡುಗೆ ಟೆನ್ಷನ್ ಮೇಲೆ ಟೆನ್ಷನ್' ಎನ್ನುತ್ತಿರುವಾಗಲೇ ಟೀವಿ ಸ್ಕ್ರೀನ್ ಮೇಲೆ ಕೆ.ಎಮ್. ನಯ್ಯಾರ್ ಕಾಣಿಸಿಕೊಂಡಿದ್ದರು. ಎಲ್ಲಾ ಚಾನಲ್‌ಗಳ ರಿಪೋರ್ಟರ್‌ಗಳು ಮೈಕುಗಳನ್ನು ನಯ್ಯಾರರ ಮುಖದ ಮುಂದೆ ಹಿಡಿದು ನಿಂತಿದ್ದರು. ನಯ್ಯಾರ್ ಕಣ್ಣುಗಳಲ್ಲಿ ನೀರು ಇಣುಕಿತ್ತು. ನಗುತ್ತಲೇ ಮಾತು ಪ್ರಾರಂಭಿಸಿದ್ದರು: 'ಸುಪ್ರೀಂ ಕೋರ್ಟಿನ ತೀರ್ಪನ್ನು ಅನಿವಾರ್ಯವಾಗಿ ಒಪ್ಪಲೇಬೇಕು. ಕಟ್ಟಡವನ್ನೋ, ಪ್ರೀತಿಯನ್ನೋ, ವಿಶ್ವಾಸವನ್ನೋ, ಸಾಹಿತ್ಯವನ್ನೋ, ಸಂಸ್ಕೃತಿಯನ್ನೋ, ಸಾಮ್ರಾಜ್ಯವನ್ನೋ ಕೆಡಹುವುದು ತುಂಬಾ ಸುಲಭ. ಆದರೆ ಕಟ್ಟುವ ಕೆಲಸ ಬಹಳ ಕಷ್ಟ. ಹಾಗೆ ಬಂಡವಾಳ ಹಾಕಿ ಎಲ್ಲಾ ಇಲಾಖೆಗಳಿಂದ ಒಪ್ಪಿಗೆ ಪಡೆದ ನಂತರವೇ ನಮ್ಮ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದು. ಕೋಸ್ಟಲ್ ರೆಗ್ಯುಲೇಶನ್ ಜೋನನ್ನು ಉಲ್ಲಂಘನೆ ಮಾಡಿರುವುದು ಈ ಪ್ರಕರಣದಲ್ಲಿ ಸ್ಪಷ್ಟವಾಗಿ ಗೋಚರಿಸಿದೆಯೆಂದು ಹೇಳುತ್ತಾ ಸುಪ್ರೀಂ ಕೋರ್ಟ್ ನೆಲಸಮ ಮಾಡಲು ಆದೇಶಿಸಿದೆ. ಪ್ರವಾಹದಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಅಪಾರ್ಟ್‌ಮೆಂಟ್‌ಗಳನ್ನು ತಾತ್ಕಾಲಿಕವಾಗಿ ವಾಸ ಮಾಡಲು ಕೊಡಬಹುದಾಗಿತ್ತು. ಅದಕ್ಕೆ ನಾನೂ ಸೇರಿ ಅಪಾರ್ಟ್‌ಮೆಂಟ್‌ಗಳ ಎಲ್ಲಾ ಓನರ್‌ಗಳೂ ಒಪ್ಪಿಕೊಳ್ಳುತ್ತಿದ್ದೆವು. ಇಷ್ಟಕ್ಕೂ ಜಗತ್ತಿನ ಎಲ್ಲಾ ನಾಗರಿಕತೆಗಳು ಹುಟ್ಟಿದ್ದು ನದಿಗಳ ದಡಗಳ ಮೇಲೆಯೇ. ಪವಿತ್ರ ನಗರಗಳಾದ ಬನಾರಸ್, ಹರಿದ್ವಾರ, ಹೃಷಿಕೇಶ, ಅಷ್ಟೇಕೆ ಪ್ರಪಂಚದ ಅನೇಕ ದೊಡ್ಡ ದೊಡ್ಡ ನಗರಗಳು ನಿಂತಿರೋದು ನದಿಗಳ ದಡದ ಮೇಲೆಯೇ. ಕಾನೂನು ಕಟ್ಟಲೆಗಳು ಹುಟ್ಟಿರೋದು ಮಾನವೀಯತೆ ಮತ್ತು ಕಾಮನ್ ಸೆನ್ಸ್‌ಗಳ ನೆಲೆಗಳ ಮೇಲೆ. ಇದೊಂದು ಅಮಾನವೀಯ ಘಟನೆ'. ಕೆ.ಎಮ್. ನಯ್ಯಾರರ ಸಂದರ್ಶನದೊಂದಿಗೆ ಚಾನೆಲ್‌ನವರು ಸಾಮಾನ್ಯ ಜನರ ಸಂದರ್ಶನವನ್ನೂ ಮಾಡುತ್ತಿದ್ದರು. ಪ್ರತಿಯೊಬ್ಬರೂ ಅಪಾರ್ಟ್‌ಮೆಂಟ್‌ಗಳನ್ನು ನೆಲಸಮ ಮಾಡಿದ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತಿದ್ದರು. 'ತುಥ್' ಎಂದು ರಾಘವರೆಡ್ಡಿ ಎದ್ದು ಟೀವಿ ಆಫ್ ಮಾಡಿದ್ದ.

ರಾಘವರೆಡ್ಡಿಯ ಫೋನ್ ರಿಂಗಾಗಿತ್ತು. 'ಬ್ರದರ್, ಅಣ್ಣ ಸತ್ಯನಾರಾಯಣುಡುವಿನ ಫೋನ್. ನಾನು ಇವೊತ್ತು ಪೂರ್ತಿ ಎಂಗೇಜ್. ರಾತ್ರಿ ಊಟಕ್ಕೂ ಗ್ಯಾರಂಟಿ ಇಲ್ಲ. ನೀನು ಅಮೃತಸರಕ್ಕೆ ಹೋಗಿ ನಾಳೆ ಬಾ. ನಾಳೆ ಸಂಜೆ ಭೇಟಿಯಾಗೋಣ' ಎಂದು ಹೊರ ನಡೆದಿದ್ದ. ಅಷ್ಟರಲ್ಲಿ ನನ್ನ ಫೋನ್ ಕೂಡಾ ಮೊಳಗಿತ್ತು. ಅಪರಿಚಿತ ಸಂಖ್ಯೆ ತೇಲಾಡುತ್ತಿತ್ತು. 'ಹಲೋ' ಎಂದಿದ್ದೆ. 'ನೀವು ಫೋನ್ ಮಾಡಿದಾಗ ನಾನು ಸ್ನಾನ ಮಾಡುತ್ತಿದ್ದೆ. ಹಾಗಾಗಿ ಆಫ್ ಮಾಡಿದ್ದೆ. ನಿಮ್ಮ ನಂಬರ್ ಮಿಸ್ಡ್ ಕಾಲ್ನಲ್ಲಿ ಇತ್ತು. ದಿಲ್ಲಿಯಲ್ಲಿ ಇದ್ದೀರಾ' ಆ ಕಡೆಯಿಂದ ಸಿಂಧೂ ಮೆನನ್ನಳ ಧ್ವನಿ. 'ಹೌದು, ದಿಲ್ಲಿಯಲ್ಲಿ ಇದ್ದೀನಿ. ಮಧ್ಯಾಹ್ನ ಊಟ ಮಾಡಿಕೊಂಡು ಇಲ್ಲಿಂದ ಹೊರಟು ರಾತ್ರಿಗೆ ಮಸ್ಸೂರಿಗೆ ಬರೋಣವೆಂದುಕೊಂಡಿದ್ದೇನೆ. ನನ್ನದು ಒಂದಿಷ್ಟು ಪರ್ಸನಲ್ ವರ್ಕ್ ಕೂಡಾ ಇತ್ತು. ಹಾಗೆ ಡಾಕ್ಟರ್ ಆಮ್ರಪಾಲಿಯನ್ನೂ ಭೇಟಿಯಾದಂತಾಗುತ್ತದೆ. ಡಾಕ್ಟರ್ ಆಮ್ರಪಾಲಿಯ ಬಗ್ಗೆ ಅರುಂಧತಿ ಪಿಳ್ಳೈ ತುಂಬಾ ಹೇಳಿದ್ದಳಲ್ಲದೆ ವಿಪರೀತ ಅಭಿಮಾನ ಇಟ್ಟುಕೊಂಡಿದ್ದಳು' ಎಂದ ನನ್ನ ಮಾತಿಗೆ, 'ಓಹ್ ಅರುಂಧತೀನ ನೆನಪಿಸಬೇಡಿ, ನನ್ನ ದೇಹದ ಒಂದು ಭಾಗವೇ ಕಳಚಿಹೋದಂತಾಗಿದೆ ನನಗೆ. ನೀವು ಮಸ್ಸೂರಿಗೆ ಬನ್ನಿ, ಇನ್ನೂ ಮೂರು ದಿನ ನಾವು ಇಲ್ಲೇ ಇರಬೇಕಾಗಿದೆ. ನಾವಿರುವ ಗೆಸ್ಟ್ ಹೌಸ್‌ನಲ್ಲೇ ರೂಂ ಖಾಲಿ ಇದೆ, ಬೇರೆ ಲಾಡ್ಜಿಂಗ್ ಮಾಡಲು ಹೋಗಬೇಡಿ. ಊಟ, ತಿಂಡಿತೀರ್ಥಗಳಿಗೇನೂ ಸಮಸ್ಯೆಯಿಲ್ಲ. ನೀವು ಚಿಕ್ಕಪ್ಪನ ಜೊತೆಯಲ್ಲಿ ತಿರುಗಾಡಿಕೊಂಡು ಆಯಾಸಪಡುತ್ತಿದ್ದ ವಿಷಯ ಆಮ್ರಪಾಲಿಗೂ ಗೊತ್ತಿದೆ' ಎಂದಿದ್ದಳು.

ಕೊಚ್ಚಿನ್‌ನಲ್ಲಿ ಅಪಾರ್ಟ್‌ಮೆಂಟ್ ಧರೆಗುರುಳಿದ ಸುದ್ದಿ ಬಹುಶಃ ಇವಳಿಗೆ ತಿಳಿದಿರಲಾರದು ಅನ್ನಿಸಿತ್ತು ನನಗೆ. ಏಕೆಂದರೆ ಅವಳ ಮಾತುಗಳಲ್ಲಿ ದುಃಖವಾಗಲೀ, ವಿಷಾದವಾಗಲೀ ನನ್ನ ಅರಿವಿಗೆ ಬಂದಿರಲಿಲ್ಲ. 'ನಿಮಗೆ ಸುದ್ದಿ ತಿಳಿದಿರಬೇಕು' ಎಂದಿದ್ದೆ ನಾನು. 'ಕೊಚ್ಚಿನ್‌ನಲ್ಲಿ ಅಪಾರ್ಟ್‌ಮೆಂಟ್ ನೆಲಸಮವಾದ ಸುದ್ದಿ ಬೆಳಿಗ್ಗೆಯಿಂದ ಟೀವಿ ಚಾನಲ್‌ಗಳಲ್ಲಿ ಬರುತ್ತಿದೆಯಂತೆ. ಭಗವಾನ್ ಕುಟ್ಟಿ ಫೋನ್ ಮಾಡಿದ್ದರು. ನಾನಂತೂ ಆ ಹೊಟ್ಟೆ ಉರಿಸುವ ದೃಶ್ಯಗಳನ್ನು ನೋಡಕೂಡದೆಂದೇ ನ್ಯೂಸ್ ಚಾನಲ್‌ಗಳನ್ನು ಆನ್ ಮಾಡಿಲ್ಲ. ನಿನ್ನೆ ರಾತ್ರಿ ಎಂಟು ಗಂಟೆಗೆ ಚಿಕ್ಕಪ್ಪ ಫೋನ್ ಮಾಡಿದಾಗಲೇ ಇವೊತ್ತಿನ ಡೆಮೊಲಿಷನ್ ಬಗ್ಗೆ ಹೇಳಿದ್ದರು. ಜಗತ್ತಿನಲ್ಲಿ ಪ್ರತಿಕ್ಷಣ ಸಂಭವಿಸುವ ಎಲ್ಲಾ ಸಂಗತಿಗಳೂ ಕೂಡಾ ಪೂರ್ವ ನಿರ್ಧರಿತವೆಂಬ ವಿಷಯ ಸಾಬೀತಾಗಿದೆ. ಹಾಗಾಗಿ ಯಾವುದಕ್ಕೂ ಹೆಚ್ಚು ದುಃಖ ಪಡುವ ಅವಶ್ಯಕತೆ ಇಲ್ಲ ಅನ್ನಿಸುತ್ತದೆ ನನಗೆ. ಏಕೆಂದರೆ ಈ ಯೂನಿವರ್ಸ್‌ನಲ್ಲಿ ಯಾವುದೂ ಶಾಶ್ವತವಲ್ಲ, ಎಸ್ಪೆಷಲಿ ಜೀವಜಗತ್ತು. ಭೂಮಿಯಲ್ಲಿ ಆವಿರ್ಭವಿಸುವ ಪ್ರತಿಯೊಂದು ವಸ್ತುವೂ ಅಂತ್ಯವಾಗುವಾಗ ಭೂಮಿಯ ರೂಪವನ್ನು ಪಡೆಯುವುದೇ ಒಂದು ಅದ್ಭುತವಾದ ಸಂಗತಿ ಮತ್ತು ಸೃಷ್ಟಿ ರಹಸ್ಯ. ಇರಲಿ, ಇವೊತ್ತು ಮಸ್ಸೂರಿಗೆ ಬರುವುದಾದರೆ ಬನ್ನಿ, ಡಾಕ್ಟ ಆಮ್ರಪಾಲಿಗೂ ವಿಷಯ ತಿಳಿಸುತ್ತೇನೆ. ಊಟಕ್ಕೆ ಬರುವುದಾದರೆ ರಾತ್ರಿ ಹತ್ತು ಗಂಟೆಯಾದರೂ ಕಾಯುತ್ತೇವೆ' ಎಂದಿದ್ದಳು. 'ಓಹ್, ಎಂಥ ವೇದಾಂತದ ಮಾತುಗಳು. ನಿಮ್ಮ ಚೈತನ್ಯ ಮತ್ತು ಸೌಂದರ್ಯದ ಹಿಂದೆ ನಿಮ್ಮ ಇಂಥ ಯೋಚನೆಗಳು ಅಡಗಿವೆಯೆಂದು ನನಗೆ ಈಗ ಅರ್ಥವಾಗ್ತಿದೆ' ಎಂದು ಮೆಚ್ಚುಗೆಯ ಮಾತುಗಳನ್ನಾಡಿದ್ದೆ. 'ಥ್ಯಾಂಕ್ಸ್ ಎ ಲಾಟ್ ಡಿಯರ್. ಅಡ್ರೆಸ್, ಲೊಕೇಶನ್ ಕಳಿಸ್ತೀನಿ'. ಅವಳ ಫೋನ್ ಕಟ್ ಆಗಿದ್ದರೂ ಅವಳ ಮಾತುಗಳು ರಿಂಗಣಿಸುತ್ತಿದ್ದವು.

ಸಿಂಧೂ ಮೆನನ್ನಳೊಂದಿಗೆ ಫೋನಿನಲ್ಲಿ ಮಾತನಾಡಿ ಲಗೇಜನ್ನು ಹಿಡಿದು ಹೊರಗೆ ಬಂದಿದ್ದೆ. ಮೂರು ದಿನಕ್ಕೆ ಇನ್ನೋವಾ ಕಾರೊಂದನ್ನು ಡ್ರೈವರ್ ಸಮೇತ ಅರೆಂಜ್ ಮಾಡಿಕೊಂಡಿದ್ದೆ. ಕಾರು ಚಲಿಸುತ್ತಿದ್ದಂತೆ ಸಿಂಧೂ ಮೆನನ್ನಳನ್ನು ಇಂದು ಭೇಟಿಯಾಗುತ್ತಿರುವ ಸಂಗತಿ ನೆನೆದು ಮನಸ್ಸು ಪ್ರಫುಲ್ಲವಾಗಿತ್ತು. ಅಷ್ಟರಲ್ಲಿ ಫೋನ್ ರಿಂಗಾಗಿತ್ತು. ಅನ್‌ನೋನ್ ನಂಬರ್. ರಿಸೀವ್ ಮಾಡಿಕೊಂಡು 'ಹಲೋ' ಎಂದಿದ್ದೆ. 'ಹಲೋ ಸಾಹೇಬ್ರೆ, ನಾನು ಭಗವಾನ್ ಕುಟ್ಟಿ. ಟೀವಿಯಲ್ಲಿ ಸುದ್ದಿ ನೋಡಿದ್ರ?' ಎಂದು ಕೇಳಿದ್ದ. ಧ್ವನಿಯಲ್ಲಿ ಗಾಬರಿಯಾಗಲೀ ದುಃಖವಾಗಲೀ ಬೆರೆತಿರಲಿಲ್ಲ. ಬಹುಶಃ ಭಗವಾನ್ ಕುಟ್ಟಿ ಸೇರಿ ಕೆ.ಎಮ್. ನಯ್ಯಾರರ ಆಪ್ತವಲಯ ಎಲ್‌ಎಸ್ಡಿ ಟ್ರಿಪ್ಪಿನಲ್ಲಿ ಇಳಿದಿರಬಹುದೇನೋ ಎಂದುಕೊಂಡೆ. ನಾನು ಧ್ವನಿಯನ್ನು ಸ್ವಲ್ಪ ಮೃದು ಮಾಡಿಕೊಂಡು 'ಆಂ , ನೋಡಿದೆ ಭಗವಾನ್ ಕುಟ್ಟಿ. ನನಗೆ ನಿಜವಾಗಿ ನ್ಯೂಯಾರ್ಕ್‌ನ 9/11 ಘಟನೆ ನೆನಪಾಯಿತು. ಟ್ವಿನ್ ಟವರ್ಸ್ ಮಗುಚಿಕೊಂಡಂತೆ ನಮ್ಮ ಅಪಾರ್ಟ್‌ಮೆಂಟ್‌ಗಳು ಉರುಳಿಕೊಂಡಿದ್ದವು. ಆದರೆ ದೇವರು ನೋಡಿ ಎಂಥಾ ಶಿಕ್ಷೆಯನ್ನು ಕೊಡುತ್ತಾನೆ; ಅವು ಉರುಳುವ ದೃಶ್ಯಗಳನ್ನು ನೋಡಲು ಅದಕ್ಕಾಗಿ ಕಷ್ಟಪಟ್ಟ ನೆಲ್ಸನ್ ಭೂಮಿಯ ಮೇಲೆಯೇ ಇಲ್ಲದಂತೆ ಮಾಡಿದ. ಕೆ.ಎಮ್. ನಯ್ಯಾರ್‌ಗೆ ಆರ್ಥಿಕವಾಗಿ ನಷ್ಟವಾಗಿರಬಹುದು, ಆದರೆ ಈ ಘಟನೆಯನ್ನು ರಾಜಕೀಯಕ್ಕೆ ಬಳಸಿಕೊಂಡಿದ್ದೇ